**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.287/2022**

ಸಾಕ್ಷಿದಾರರ ಹೆಸರು : ಲೋಕೇಶ ಸಿ.ಡಬ್ಲ್ಯೂ: 6 ಪಿ.ಡಬ್ಲ್ಯೂ: 6
ತಂದೆಯ ಹೆಸರು : ಹುಚ್ಚಯ್ಯ
ವಯಸ್ಸು : 30 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸ ಸ್ಥಳ : ಅಣಜೂರು

ದಿನಾಂಕಃ 13.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿಗಳು ನನಗೆ ಪರಿಚಯ ಇರುತ್ತಾರೆ. ಈಗ ನನಗೆ ತೋರಿಸಿದ ಆಟೋ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಆಟೋ ಅಮಾನತ್ತು ಮಹಜರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಮಹಜರ್ ನ್ನು ನಿ.ಪಿ.11 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೊಲೀಸರು ಯಾವುದೇ ಸ್ವತ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನನ್ನ ಜೊತೆ ನಿ.ಪಿ.11 ದಾಖಲೆಗೆ ಬೇರೆ ಯಾರು ಸಹಿ ಮಾಡಿರುವುದಿಲ್ಲ. ನಿ.ಪಿ.11 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.11 ದಾಖಲೆಯನ್ನು ನಾನು ಓದಿ ನೋಡಿರುವುದಿಲ್ಲ. ನಿ.ಪಿ.11 ದಾಖಲೆಯನ್ನು ನನಗೆ ಪೊಲೀಸರು ಓದಿ ಹೇಳಿರುವುದಿಲ್ಲ. ಯಾವ ಕಾರಣಕ್ಕಾಗಿ ನಿ.ಪಿ.11 ದಾಖಲೆಗೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸದರಿ ಸಹಿಯನ್ನು ಹಾಕಿರುತ್ತೇನೆ. ಈಗ ನನಗೆ ತೋರಿಸಿದ ನೋಟೀಸಿನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ನೋಟೀಸನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ಛಾಯಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು. ಛಾಯಚಿತ್ರಗಳನ್ನು ನಿ.ಪಿ.13 ಮತ್ತು 14 ಎಂದು

ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ಮಹಜರ್ ಗೆ ಸಹಕರಿಸುವಂತೆ ನನಗೆ ಪೊಲೀಸರು ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನನಗೆ ಮತ್ತು ಚಾಸಾ.7 ರವರಿಗೆ ಆಟೋ ಅಮಾನತ್ತು ಕಾಲದಲ್ಲಿ ಮಹಜರ್ ಗೆ ಸಹಕರಿಸುವಂತೆ ಪೊಲೀಸರು ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಮೇರೆಗೆ ದಿಃ 09.02.2022 ರಂದು ಮಹಜರ್ ಕಾಲದಲ್ಲಿ 12.00 ರಿಂದ 13.00 ಗಂಟೆ ವರೆಗೆ ನಾನು ಮತ್ತು ಚಾಸಾ.7 ರವರು ಕೃತ್ಯ ಸ್ಥಳದಲ್ಲಿ ಹಾಜರಿದ್ದೆವು ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ.7 ರವರ ಸಮಕ್ಷಮ ಪೊಲೀಸರು ಆಟೋ ಸಂಖ್ಯೆ ಕೆ.ಎ.18/ಬಿ.5419 ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಕೆ.ಸಿ.ಸಿ ವಕೀಲರಿಂದ – 6 ಮತ್ತು 7 ನೇ ಆರೋಪಿತರ ಪರವಾಗಿ**

3. ಪಾಟೀ ಸವಾಲು ಇರುವುದಿಲ್ಲ.

**ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ – 1 ರಿಂದ 4 ನೇ ಆರೋಪಿತನ ಪರವಾಗಿ**

4. ಪಾಟೀ ಸವಾಲು ಇರುವುದಿಲ್ಲ.

**ಪಾಟೀ ಸವಾಲು ಶ್ರೀ ಪಿ.ಕೆ. ವಕೀಲರಿಂದ – 5 ನೇ ಆರೋಪಿ ಪರವಾಗಿ**

5. ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ